ರೂ. 25.00 ಲಕ್ಷ ಅನುದಾನವನ್ನು 1998–99ನೇ ಸಾಲಿನಲ್ಲಿ ಬಿಡುಗಡೆ ಗೊಳಿಸಲಾಗಿದೆ.

ಈ) ಹೌದು.

ಉ) ಹೆಚ್ಚುವರಿ ರೂ. 233.65 ಲಕ್ಷಗಳ ಅನುದಾನ ಕೋರಿಕೆಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಜಿಲ್ಲಾ ಕ್ರೀಡಾಂಗಣದಲ್ಲಿ ಅಗತ್ಯವಾದ ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಋ) ನಿರ್ಮಾಣ ಕಾಮಗಾರಿ ಪೂರ್ಣಗೊಂಡ ನಂತರ 400 ಮೀ ಓಟದ ಪಥ, ಪ್ರೇಕ್ಷಕರ ಗ್ಯಾಲರಿ, ಖೋಖೋ, ಕಬ್ಬಡ್ಡಿ, ವಾಲಿಬಾಲ್ ಅಂಕಣಗಳು ಕ್ರೀಡಾಂಗಣದ ಜಿಮ್ ಸೌಲಭ್ಯ ಮಹಿಳೆ ಹಾಗೂ ಪುರುಷ ಕ್ರೀಡಾಪಟುಗಳಿಗೆ ಪ್ರತ್ಯೇಕವಾಗಿ ಬಟ್ಟೆ ಬದಲಾಯಿಸುವ ಕೊಠಡಿ, ಶೌಚಾಲಯ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುವುದು.

ಎ) ಜಿಲ್ಲಾ ಕ್ರೀಡಾಂಗಣ ಸಮಿತಿ ಆದಷ್ಟು ಶೀಘ್ರ ಅಗತ್ಯ ಕ್ರಮ ವಹಿಸಲು ಸೂಚಿಸಲಾಗುವುದು.

ಕೊಪ್ಪಳ ಕ್ಷೇತ್ರದಲ್ಲಿ ನೆರೆ ಹಾವಳಿಯಿಂದ ತೊಂದರೆಗೀಡಾಗಿರುವುದು

38 (198) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ಹಿರೆಹಳ್ಳ ಅಣೆಕಟ್ಟಿನ ವ್ಯಾಪ್ತಿಯಲ್ಲಿ ಭಾರಿ ಮಳೆ ಬಿದ್ದಾಗ ಆ ಭಾಗದ ಸುತ್ತಮುತ್ತಲ (ಇನ್ನಿತರ) ಹಳ್ಳಿಗಳಾದ, ಗುನ್ನಳ್ಳಿ, ಕಾಟ್ರಳ್ಳಿ, ಭೂದಿಹಾಳ, ಚಿಕ್ಕಸಿಂಧೋಗಿ, ಹಿರೇಸಿಂಧೋಗಿ, ಡಂಬ್ರಳ್ಳಿ ಹಾಗೂ ಇನ್ನಿತರ ಹಳ್ಳಿಗಳಲ್ಲಿ ನೀರಿನ ಹರಿವಿನಿಂದ ಸದರಿ ಗ್ರಾಮಗಳು ನೆರೆ ಹಾವಳಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸದರಿ ಗ್ರಾಮಗಳನ್ನು ನವಗ್ರಾಮ ಮಾಡುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳ ರೂಪುರೇಷೆಗಳೇನು;

ಇ) ಸದರಿ ಗ್ರಾಮಗಳ ರೈತರ ಜಮೀನುಗಳಿಗೆ ನೀರು ನುಗ್ಗಿ ಈ ಒಂದು ವರ್ಷದಲ್ಲಿ ಹಿಂಗಾರು ಮತ್ತು ಮುಂಗಾರು ಬೆಳೆಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಜಮೀನಿನ ವಿವರ ನೀಡುವುದು;

ಈ) ಹಾನಿಗೊಳಪಟ್ಟ ಜಮೀನನ್ನು ಸರ್ಕಾರವು ಸರ್ವೇ ಕಾರ್ಯಮಾಡಿದೆಯೇ, ಹಾಗಿದ್ದಲ್ಲಿ, ಈ ಜಮೀನುಗಳ ವ್ಯಾಪ್ತಿಯನ್ನು ಮುಳುಗಡೆ ಪ್ರದೇಶವೆಂದು ಘೋಷಣೆ ಮಾಡುವ ಚಿಂತನೆಯು ಸರ್ಕಾರದ ಮುಂದಿದೆಯೇ, ಹಾಗಿದಲ್ಲಿ ಎಂದಿನಿಂದ ಮಾಡಲಾಗುವುದು (ವಿವರ ನೀಡುವುದು)?

ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹಿರೇಹಳ್ಳ ಅಣೇಕಟ್ಟಿನ ವ್ಯಾಪ್ತಿಯಲ್ಲಿ ಭಾರಿ ಮಳೆಯಿಂದಾಗಿ ಗುನ್ನಳ್ಳಿ, ಕಾಟ್ರಳ್ಳಿ, ಹಿರೇಸಿಂಧೋಗಿ, ಚಿಕ್ಕಸಿಂಧೋಗಿ, ಕೋಳೂರು, ನರೆಗಲ್ ಮತ್ತು ಮಾದಿನೂರು ಹಾಗೂ ಇನ್ನಿತರ ಗ್ರಾಮಗಳು ನೀರಿನ ಹರಿವಿನಿಂದ ನೆರೆ ಹಾವಳಿ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮೇಲ್ಕಾಣಿಸಿದ ಎಲ್ಲಾ ಗ್ರಾಮಗಳನ್ನು ಸ್ಥಳಾಂತರಿಸಲು ಖಾಸಗಿ ಜಮೀನನ್ನು ಖರೀದಿಸಿ ನಿವೇಶನ ರಚಿಸಲಾಗಿದೆ. ಹಿರೇಸಿಂಧೋಗಿ ಮತ್ತು ಕೋಳೂರು ಗ್ರಾಮಗಳಲ್ಲಿ ಮನೆ ನಿರ್ಮಾಣ ಕಾರ್ಯಪ್ರಾರಂಭಿಸಲಾಗಿದೆ. ಇನ್ನುಳಿದ ಗ್ರಾಮಗಳಿಗೂ ಮನೆ ನಿರ್ಮಾಣಕ್ಕಾಗಿ ದಾನಿಗಳನ್ನು ಗುರ್ತಿಸಿ ಮನೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಇ) ಬಂದಿದೆ. ಒಟ್ಟು 1653 ರೈತರಿಗೆ ಸಂಬಂಧಿಸಿದಂತೆ 1668.85 ಹೆಕ್ಟೇರ್ ಬೆಳೆ ನಾಶವಾಗಿರುತ್ತದೆ. ಈ ಬೆಳೆ ನಾಶಕ್ಕೆ ಸಿಆರ್‌ಎಫ್/ಎನ್‌ಸಿಸಿಎಫ್ ಮಾರ್ಗಸೂಚಿ ಪ್ರಕಾರ ಒಟ್ಟು ರೂ. 40.23 ಲಕ್ಷಗಳ ಪರಿಹಾರ ನೀಡಲಾಗಿದೆ.

ಈ) ಬೆಳೆ ಹಾನಿಯ ಸರ್ವೇ ಕಾರ್ಯ ಮಾಡಿ ಸಿಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ಪರಿಹಾರವನ್ನು ನೀಡಲಾಗಿದೆ. ಸದರಿ ಹಾನಿಗೊಳಗಾದ ಜಮೀನುಗಳ ವ್ಯಾಪ್ತಿ ಪ್ರದೇಶವು ಕೇವಲ ಅತಿವೃಷ್ಟಿಯಿಂದ ಹಿರೇಹಳ್ಳ ಅಣೆಕಟ್ಟಿನಿಂದ ಹೆಚ್ಚುವರಿ ನೀರು ಸಂಗ್ರಹವಾದ ಸಂದರ್ಭದಲ್ಲಿ ಮಾತ್ರ ನೀರನ್ನು ಹೊರಬಿಡುವುದರಿಂದ ಆಗಿನ ಮಟ್ಟಿಗೆ ಸದರಿ ಜಮೀನುಗಳಲ್ಲಿ ನೀರು ಹರಿದು ಹೋಗುವುದರಿಂದ ಬೆಳೆಹಾನಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜಮೀನುಗಳನ್ನು ಮುಳುಗಡೆ ಪ್ರದೇಶವೆಂದು ಘೋಷಿಸುವ ಪ್ರಸ್ತಾವನೆ ಇರುವುದಿಲ್ಲ.